ಆ) ಸಬ್ ರಿಜಿಸ್ಟ್ರಾರ್ ಅಧಿಕಾರಿಯ ಹುದ್ದೆ ಖಾಲಿ ಇರುವುದು ನಿಜವೆ?

ಇ) ಈ ಹುದ್ದೆಯನ್ನು ತುಂಬಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ)

ವರ್ಷ	ಆದಾಯ
1993-94	35,85, 354-00 ರೂ.
1994-95	40,86, 294-00 ರೂ.
1995-96	66,80, 974-00 ರೂ.
ಒಟ್ಟು	1,43,52,622-00 ರೂ.

ಆ) ಸಬ್ ರಿಜಿಸ್ಟ್ರಾರ್ ಹುದ್ದೆ ಖಾಲಿ ಇರುವುದಿಲ್ಲ. ಆದರೆ, ಸದರಿ ಉಪ–ನೋಂದಣಾಧಿಕಾರಿಯನ್ನು ನೋಂದಣಿ ಮಹಾ ಪರಿವೀಕ್ಷಕರ ಕಛೇರಿಯ ಅಧಿಕೃತ ಜ್ಞಾಪನ ಸಂ. ಸಿಬ್ಬಂದಿ. 1-346:95-96, ದಿನಾಂಕ: 9-11-95 ರ ಪ್ರಕಾರ ಕೇಂದ್ರ ಕಛೇರಿಗೆ ಆಡಳಿತಾತ್ಮಕ ದೃಷ್ಟಿಯಿಂದ ನಿಯೋಜನೆ ಮೇಲೆ ತೆಗೆದುಕೊಳ್ಳಲಾಗಿದೆ.

ಇ) ಶಿರ್ಶಿ ಉಪ–ನೋಂದಣಾಧಿಕಾರಿಗಳ ಹುದ್ದೆ ಖಾಲಿ ಇಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೂ ಸದರಿ ಉಪ–ನೋಂದಣಾಧಿಕಾರಿಯನ್ನು ಶೀಘ್ರದಲ್ಲಿಯೇ ವಾಪಸ್ಸು ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಪಿ.ಎಸ್. ಜಯವಂತ್:- ಮಾನ್ಯ ಅಧ್ಯಕ್ಷರೇ, ಶಿರ್ಶಿ ಸಬ್‌ರಿಜಿಸ್ಟ್ರಾರ್ ಕಛೇರಿಗೆ ಕಳೆದ ಹತ್ತು ತಿಂಗಳುಗಳಿಂದ ಸಬ್‌ರಿಜಿಸ್ಟ್ರಾರ್ ಇಲ್ಲ. ತಾವು ಯಾರನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೀರಿ, ಅವರು ಡೆಪ್ಯುಟೇಶನ್ ಮೇಲೆ ಬೇರೇ ಕಡೆಗೆ ಹೋಗಿದ್ದಾರೆ. ಹೀಗಾಗಿ ಅಲ್ಲಿನ ಕೆಲಸಕಾರ್ಯಗಳು ಸ್ಥಗಿತವಾಗಿದೆ. ಸಾರ್ವಜನಿಕರಿಗೆ ತೊಂದರೆಯಾಗಿದೆ. ಆದ್ದರಿಂದ ತಕ್ಷಣ ಅಲ್ಲಿಗೆ ಸಬ್‌ರಿಜಿಸ್ಟ್ರಾರನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಸರಕಾರಕ್ಕೆ ಸಬ್‌ರಿಜಿಸ್ಟ್ರಾರ್ ನೇಮಕ ಮಾಡುವುದು ಕಷ್ಟವೇ? ಮಾಡಿಸಿಕೊಡುತ್ತೇವೆ ಎಂದು ಹೇಳಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಸಚಿವರು - ಕಂದಾಯ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಇದು ಸರಕಾರದ ಗಮನಕ್ಕೆ ಬಂದಿದೆ. ಅಲ್ಲಿಗೆ ಅಧಿಕಾರಿಯನ್ನು ಡೆಪ್ಯುಟೇಶನ್ ಮಾಡಿದ್ದಾರೆ. ಇದು ತಾತ್ಕಾಲಿಕವಾದ ವ್ಯವಸ್ಥೆ. ಖಾಯಂ ಆಗಿ ಅಲ್ಲಿಗೆ ಸಬ್‌ರಿಜಿಸ್ಟ್ರಾರ್‌ನ್ನು ನೇಮಕ ಮಾಡುವ ಕೆಲಸವನ್ನು ಸರಕಾರ ಮಾಡುತ್ತದೆ ಎಂದು ಹೇಳಬಯಸುತ್ತೇನೆ.

ವಿಷಯ:- ಸೋಮವಾರಪೇಟೆ ತಾಲ್ಲೂಕಿನಲ್ಲಿ ಸ್ಮಶಾನ ಮಂಜೂರಾತಿ.

293 (1859) **ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೋಮವಾರಪೇಟೆ ತಾಲ್ಲೂಕು ಶನಿವಾರ ಸಂತೆ ಹೋಬಳಿ ಚಿಕ್ಕೊಳತ್ತೂರು ಗ್ರಾಮದ ಸ.ನಂ. 64:2ರಲ್ಲಿ 5.00 ಎಕರೆ ಊರುಡುವೆ ಜಾಗವನ್ನು ಒಂದು ಜನಾಂಗದ ಸ್ಮಶಾನಕ್ಕೆ ಮಂಜೂರು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಊರುಡುವ ಜಾಗವನ್ನು ನಿರ್ದಿಷ್ಟ ಜನಾಂಗವೊಂದರ ಸ್ಮಶಾನಕ್ಕಾಗಿ ಮಂಜೂರು ಮಾಡಲು 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮ 71ರ ಅನ್ವಯ ಅವಕಾಶವಿದೆಯೇ?

ಇ) ಹಾಗಿದ್ದಲ್ಲಿ, ಈ ಮಂಜೂರಾತಿಯನ್ನು ವಜಾ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಹೌದು, ಸ.ನಂ. 64:2ರಲ್ಲಿ ಎರಡು ಎಕರೆ ಜಾಗವನ್ನು ಮಾತ್ರ ಜಿಲ್ಲಾಧಿಕಾರಿ ಕೊಡಗು ಜಿಲ್ಲೆ ಮಡಿಕೇರಿ ಇವರು ಸದರಿ ಉದ್ದೇಶಕ್ಕಾಗಿ ದಿನಾಂಕ: 4-1-1988ರ ಆದೇಶದಡಿ ಮೀಸಲಿಡಲಾಗಿದೆ ಎಂದು ಸರ್ಕಾರದ ಗಮನಕ್ಕೆ ತಂದಿರುವರು.

ಆ) 1964ರ ಭೂ ಕಂದಾಯ ಕಾಯಿದೆಯ ಕಲಂ 71ರ ಮೇರೆಗೆ ಸ್ಥಳ ಕಾಯ್ದಿರಿಸಲು ಅವಕಾಶವಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅವರು ಉತ್ತರದಲ್ಲಿ ಸ್ಥಳ ಮಂಜೂರಾತಿಯಾಗಿರುವುದಿಲ್ಲ, ಕಾದಿರಿಸಲಾಗಿದೆ ಎಂದು ಕೊಟ್ಟಿದ್ದಾರೆ. ಇದು ಊರುಡುವೆ ಪೈಸಾರಿ ಜಮೀನು ಆದುದರಿಂದ ಇದನ್ನು ಕೊಡಲು ಡಿ.ಸಿ.ಯವರಿಗೆ ಪ್ರಾವಿಶನ್ ಇದೆಯೇ? ಇದು ಡಿವಿಜನಲ್ ಕಮಿಷನರ್ ಲೆವೆಲ್‌ನಲ್ಲಿ ಆಗಬೇಕು. ಈ ಊರುಡುವೆ ಪೈಸಾರಿಯಲ್ಲಿ ಅರಣ್ಯ ಬೆಳೆಸಲು ಊರಿನವರು ಸಹಕಾರ ಕೊಟ್ಟಿದ್ದಾರೆ. ಅಲ್ಲಿ ಸ್ಮಶಾನ ಆಗಬಾರದು ಎಂದು ಜನರ ಪ್ರತಿಭಟನೆ ಕೂಡ ಇದೆ. ಆದ್ದರಿಂದ ತಾವು ಸ್ಮಶಾನಕ್ಕಾಗಿ ಬೇರೆ ಜಾಗವನ್ನು ಕೊಡಬೇಕು. ಅಲ್ಲಿ ಅರಣ್ಯವನ್ನು ಬೆಳೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಸೂಕ್ತ ಕ್ರಮ ತೆಗೆದುಕೊಂಡು ಸರಕಾರಕ್ಕೆ ರಿಪೋರ್ಟ್ ಮಾಡಬೇಕೆಂದು ಹೇಳಿದೆ. ಜಿಲ್ಲಾಧಿಕಾರಿಗಳ ರಿಪೋರ್ಟ್ ಬಂದ ತತ್‌ಕ್ಷಣ ಮುಂದಿನ ಕಾರ್ಯಕ್ರಮವನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಸರಕಾರವು ನಿರ್ಧಾರ ಮಾಡುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ಮಾನ್ಯ ಅಧ್ಯಕ್ಷರೇ, ಆಲ್ಲಿ ಮ್ಯುಟೇಶನ್ ರಿಜಿಸ್ಟರ್‌ನಲ್ಲಿಯೂ ಕೂಡ ಯಾವುದೇ ಅರಣ್ಯಸಂಪತ್ತನ್ನು ನಾಶಪಡಿಸದ ರೀತಿಯಲ್ಲಿ ಸ್ಮಶಾನವಾಗಿ ಉಳಿಸಬೇಕೆಂದು ಕೊಟ್ಟಿದ್ದಾರೆ. ಅರಣ್ಯವನ್ನು ನಾಶಪಡಿಸದೇ ಸ್ಮಶಾನವನ್ನು ಮಾಡುವುದು ಸಾಧ್ಯವೇ? ಆದ್ದರಿಂದ ಆ

ಪ್ರದೇಶವನ್ನು ಅರಣ್ಯಪ್ರದೇಶವಾಗಿ ಉಳಿಸಿಕೊಂಡು ಸ್ಮಶಾನಕ್ಕೆ ಬೇರೆ ಜಾಗವನ್ನು ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯಪಡಿಸುತ್ತಿದ್ದೇನೆ.

ಅಧ್ಯಕ್ಷರು:- ರಿಪೋರ್ಟ್ ತರಿಸಿಕೊಂಡು ಅಲ್ಲಿ ಬೇರೆ ಜಾಗವಿದ್ದರೆ ಅದನ್ನು ಕೊಟ್ಟು ಅರಣ್ಯವನ್ನು ಉಳಿಸಿಕೊಳ್ಳಲು ಕ್ರಮ ಜರುಗಿಸಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಈ ಬಗ್ಗೆ ಸರಕಾರದವರು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ ಎಂದು ಹೇಳಬಯಸುತ್ತೇನೆ.

ವಿಷಯ:- ಕ.ರಾ.ರ.ಸಾ. ಸಂಸ್ಥೆಯಲ್ಲಿ ನೌಕರರ ಕೊರತೆ.

294 (1823) **ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋದಲ್ಲಿ 'ಕಂಡಕ್ಟರ್, ಡ್ರೈವರ್ ಹಾಗೂ ಮೆಕ್ಯಾನಿಕ್‌ಗಳ' ಕೊರತೆ ಇರುವುದು ನಿಜವೇ ಹಾಗೂ ಇದರಿಂದಾಗಿ ಸಾಕಷ್ಟು ಬಸ್ಸುಗಳ ಓಡಾಟ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಸುಧಾರಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು):-

ಅ) ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಡಿಪೋಗಳನ್ನೊಳಗೊಂಡಂತೆ ಚಾಲಕ: ನಿರ್ವಾಹಕ: ಮೆಕ್ಯಾನಿಕ್ ಹುದ್ದೆಗಳ ಖಾಲಿ ಇರುವ ವಿವರ ಈ ರೀತಿ ಇದೆ.

ಚಾಲಕ	:	0229 ಹುದ್ದೆಗಳು
ನಿರ್ವಾಹಕ	:	1335 ಹುದ್ದೆಗಳು
ಮೆಕ್ಯಾನಿಕ್	:	2189 ಹುದ್ದೆಗಳು
		3753 ಹುದ್ದೆಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪದವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳು 1982ರ ಪ್ರಕಾರ ಮೇಲೆ ಸೂಚಿಸಿರುವಂತೆ ಒಟ್ಟು 3753 ಖಾಲಿ ಇರುವ ಚಾಲಕ, ನಿರ್ವಾಹಕ ಮತ್ತು ಮೆಕ್ಯಾನಿಕ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ ಬಸ್ಸುಗಳ ಓಡಾಟ ಸ್ಥಗಿತಗೊಂಡಿರುವುದಿಲ್ಲ.

ಆ) ಖಾಲಿ ಇರುವ ಚಾಲಕ, ನಿರ್ವಾಹಕ ಹುದ್ದೆಗಳಿಂದ ಅನುಸೂಚಿಗಳು ರದ್ದಾಗುವುದನ್ನು ತಪ್ಪಿಸಲು ತಾತ್ಕಾಲಿಕ ನೇಮಕಾತಿ ಆಶ್ರಯದಲ್ಲಿ ತಾತ್ಕಾಲಿಕವಾಗಿ ಚಾಲಕ: ನಿರ್ವಾಹಕರನ್ನು ಹಾಗೂ ಖಾಲಿ ಇರುವ ಮೆಕ್ಯಾನಿಕ್ ಹುದ್ದೆಗಳ ವಿರುದ್ಧ ಶಿಶಿಕ್ಷುಗಳನ್ನು ತರಬೇತಿಯ ಮೇಲೆ ನಿಯೋಜಿಸಲಾಗಿದೆ.